# ಕೃಷಿ ಜಗತ್ತು; ಸಾಲು ಸಾಲು ವಿಪತ್ತು

ಕೃಷಿ ಕ್ಷೇತ್ರದ ಬಗ್ಗೆ ಯೋಚಿಸುವಾಗ ಒಂದು ನಿರ್ದಿಷ್ಟ ವರ್ಷದ 365 ದಿನವನ್ನು ಮನದಲ್ಲಿರಿಸಿಕೊಂಡು ಲೆಕ್ಕ ಹಾಕಲು ಸಾಧ್ಯವಿಲ್ಲ. ಎಷ್ಟೇ ಆದರೂ ತಾತ ಬಿತ್ತಿದ ಬೀಜದ ಫಲ ಮೊಮ್ಮಗ ಉಣ್ಣಲಿ ಎಂದು ನಿರೀಕ್ಷಿಸುವ ಕ್ಷೇತ್ರ ತಾನೆ ಇದು. ರೈತರ ಬಗ್ಗೆ ಮಾತನಾಡುವಾಗ ಸಹಜವಾಗಿ ಪ್ರಸ್ತಾಪವಾಗುವ ಎರಡು ಮುಖ್ಯ ವಿಚಾರಗಳು ಸಾಲ ಮನ್ನಾ ಮತ್ತು ರೈತರ ಆತ್ಮಹತ್ಯೆ.

### ಸಾಲ ಮನ್ನಾ ಗೊಂದಲ

ಜುಲೈ 2018ರಂದು ಅಂದಿನ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಮಂಡಿಸಿದ ಬಜೆಟ್‌ನಲ್ಲಿ ₹ 2 ಲಕ್ಷದ ವರೆಗಿನ ಸಹಕಾರ ಬ್ಯಾಂಕ್‌ಗಳಲ್ಲಿನ ಕೃಷಿ ಸಾಲ ಮನ್ನಾ ಘೋಷಣೆ ಮಾಡಿದ್ದರು. ಅದನ್ನು ಈಡೇರಿಸಲು ಜನವರಿ 31, 2019ರ ಗುರಿ ಇಟ್ಟುಕೊಂಡಿದ್ದರು. ವಾಣಿಜ್ಯ ಬ್ಯಾಂಕ್‌ಗಳ ವಿಚಾರದಲ್ಲಿ ಹಗ್ಗಜಗ್ಗಾಟ ಮುಂದುವರಿಯಿತು. ಸರ್ಕಾರ ಅಂಕಿಅಂಶ ಬಿಡುಗಡೆ ಮಾಡಿ ಸಾಲ ಮನ್ನಾ ಮಾಡಿದ್ದೇವೆ ಎಂದರೆ, 'ನಮಗೆ ಉಪಯೋಗವಾಗಿಲ್ಲ' ಎಂದು ರೈತರು ಹೇಳುತ್ತಿದ್ದಾರೆ. 'ರಾಜ್ಯ, ನೆರೆಯಿಂದ ಕಂಗಾಲಾಗಿರುವ ಕಾರಣ, ಈ ವರ್ಷ ಸಂಪೂರ್ಣ ಸಾಲ ಮನ್ನಾ ಮಾಡುವುದು ಸಾಧ್ಯವಿಲ್ಲ' ಎನ್ನುವುದು ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಸ್ಪಷ್ಟ ನುಡಿ.

### ರೈತರ ಆತ್ಮಹತ್ಯೆ

ಈ ವರ್ಷ ಜ.1ರಿಂದ ನ.30ರವರೆಗೆ (11 ತಿಂಗಳಲ್ಲಿ) ರಾಜ್ಯದ ವಿವಿಧೆಡೆ ಆತ್ಮಹತ್ಯೆ ಮಾಡಿಕೊಂಡ ರೈತರ ಒಟ್ಟು ಸಂಖ್ಯೆ 612. ಈ ಪೈಕಿ 379 ಪ್ರಕರಣಗಳಲ್ಲಿ ಸರ್ಕಾರ ಪರಿಹಾರ (₹ 5 ಲಕ್ಷ) ನೀಡಿದೆ. ಬೆಳಗಾವಿ ಜಿಲ್ಲೆಯಲ್ಲಿ ಅತಿಹೆಚ್ಚು (59) ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರು. ಸಾಲ ಮರುಪಾವಾವತಿ ಸಮಸ್ಯೆ, ಧಾರಣೆ ಕುಸಿತ, ಬೆಳೆಹಾನಿ ಮತ್ತು ಅದರಿಂದ ಆವರಿಸಿದ ಖಿನ್ನತೆ ಈ ವರ್ಷವೂ ರೈತರ ಆತ್ಮಹತ್ಯೆಗೆ ಮುಖ್ಯ ಕಾರಣಗಳಾಗಿ ಮುಂದುವರಿದವು.

### ಕಿಸಾನ್ ಸಮ್ಮಾನ್

ಕಳೆದ ವರ್ಷ ನಡೆದ ಲೋಕಸಭೆ ಚುನಾವಣೆಯಲ್ಲಿ ಬೆಳೆ ಸಾಲ ಮನ್ನಾ ವಿಚಾರ ಪ್ರಸ್ತಾಪವಾಗಿತ್ತು. ಇದು ಕಣ್ಣೊರೆಸುವ ಯೋಜನೆ ಎಂದಿದ್ದ ಪ್ರಧಾನಿ ನರೇಂದ್ರ ಮೋದಿ ಸಣ್ಣ ಮತ್ತು ಅತಿಸಣ್ಣ ರೈತರಿಗೆ ₹ 6000 ಸಹಾಯಧನ ನೀಡುವ ಕಿಸಾನ್ ಸಮ್ಮಾನ್ ನಿಧಿ ಘೋಷಿಸಿದ್ದರು. ಜುಲೈ ತಿಂಗಳಲ್ಲಿ ನಿರ್ಮಲಾ ಸೀತಾರಾಮನ್ ಮಧ್ಯಂತರ ಬಜೆಟ್ ಮಂಡಿಸಿ, ಈ ಯೋಜನೆಯನ್ನು ಪುನರುಚ್ಚರಿಸಿದರು. ರಾಜ್ಯದ 31.72 ಲಕ್ಷ ರೈತರಿಗೆ ಈ ಯೋಜನೆಯ ಫಲ ಸಿಕ್ಕಿದೆ.

15

### ಗೊಬ್ಬರ, ಹೊಸ ಇಲಾಖೆ

ರಸಗೊಬ್ಬರದ ಸಬ್ಸಿಡಿಗೆ ಈ ವರ್ಷ ಕೇಂದ್ರ ಸರ್ಕಾರ ಮೀಸಲಿಟ್ಟ ಹಣ ₹80 ಸಾವಿರ ಕೋಟಿ. ಮೀನುಗಾರಿಕೆ, ಪಶು ಸಂಗೋಪನೆ ಮತ್ತು ಡೇರಿ ಸಚಿವಾಲಯವನ್ನು ಹೊಸದಾಗಿ ರಚಿಸಿದ್ದು ಮತ್ತೊಂದು ಗಮನಾರ್ಹ ಬೆಳವಣಿಗೆ. ದೇಶದೆಲ್ಲೆಡೆ ಶೂನ್ಯ ಬಂಡವಾಳ ಕೃಷಿಗೆ ಪ್ರೋತ್ಸಾಹ ನೀಡುವುದಾಗಿ ಕೇಂದ್ರ ಈ ವರ್ಷ ಅಧಿಕೃತವಾಗಿ ಘೋಷಿಸಿತು.

### ಆರ್‌ಸಿಇಪಿ

ರೈತರಲ್ಲಿ ಅದರಲ್ಲೂ ಮುಖ್ಯವಾಗಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದವರಲ್ಲಿ ವ್ಯಾಪಕ ಆತಂಕ ಮೂಡಿಸಿದ್ದ ಸಂಗತಿ ಆರ್‌ಸಿಇಪಿ (ಪ್ರಾದೇಶಿಕ ಸಮಗ್ರ ಆರ್ಥಿಕ ಸಹಭಾಗಿತ್ವ) ಒಪ್ಪಂದ. ಏಷ್ಯಾದ ಹತ್ತು ಅಸಿಯಾನ್ ದೇಶಗಳಾದ ಬ್ರೂನೈ, ಕಾಂಬೋಡಿಯಾ, ಸಿಂಗಾಪುರ, ಫಿಲಿಫೈನ್ಸ್, ಇಂಡೊನೇಷ್ಯಾ, ಲಾವೋಸ್, ಥಾಯ್ಲೆಂಡ್, ಮಲೇಷ್ಯಾ, ವಿಯೆಟ್ನಾಂ ಮತ್ತು ಮ್ಯಾನ್ಮಾರ್ ದೇಶಗಳ ಜೊತೆ ಆಸ್ಟ್ರೇಲಿಯಾ, ಭಾರತ, ಚೀನಾ, ಜಪಾನ್, ಕೊರಿಯಾ ಮತ್ತು ನ್ಯೂಜಿಲೆಂಡ್ ಈ ಒಪ್ಪಂದ ಮಾಡಿಕೊಳ್ಳಲು ಮುಂದಾಗಿದ್ದವು.

ಡೇರಿ ಉದ್ಯಮದಲ್ಲಿ ಮುಂಚೂಣಿಯಲ್ಲಿರುವ ಆಸ್ಟ್ರೇಲಿಯಾ, ನ್ಯೂಜಿಲೆಂಡ್‌ನಂಥ ದೇಶಗಳ ಬಹುರಾಷ್ಟ್ರೀಯ ಕಂಪನಿಗಳು ಭಾರತದಲ್ಲಿಯೂ ಮುಕ್ತ ವಹಿವಾಟು ಮಾಡಬಹುದು ಎನ್ನುವ ಆತಂಕದಿಂದ ರಾಜ್ಯದ ಹೈನುಗಾರರು ಬೀದಿಗಳಿದು ಹೋರಾಡಿದ್ದರು. ಒತ್ತಡಕ್ಕೆ ಮಣಿದ ಕೇಂದ್ರ ಸರ್ಕಾರ ಒಪ್ಪಂದಕ್ಕೆ ಸಹಿಹಾಕಲಿಲ್ಲ. ಆದರೆ 2020ರಲ್ಲಿ ಇದು ಜಾರಿಯಾಗಬಹುದು ಎಂಬ ಭೀತಿ ಮಾತ್ರ ಇಂದಿಗೂ ಚಾಲ್ತಿಯಲ್ಲಿದೆ.

